# ಅಮರೇಶ ನುಗಡೋಣಿಯವರ
# 'ದಡ ಸೇರಿಸು ತಂದೆ' ಸಂಕಲನದ ಕತೆಗಳ ಕುರಿತು


**ಅಮರೇಂದ್ರ ಶೆಟ್ಟಿ ಆರ್.***



**DOI: https://doi.org/10.5281/zenodo.22250058**



**ABSTRACT**

ಅಮರೇಶ ನುಗಡೋಣಿಯವರ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕೃತ 'ದಡ ಸೇರಿಸು ತಂದೆ' ಕಥಾಸಂಕಲನವು ಬದುಕಿನ ಸಂಕೀರ್ಣತೆಗಳನ್ನು ಮತ್ತು ಸೂಕ್ಷ್ಮಗಳನ್ನು ಅತ್ಯಂತ ವಿಸ್ತಾರವಾಗಿ ಕಟ್ಟಿಕೊಡುತ್ತದೆ. ಕಲ್ಯಾಣ ಕರ್ನಾಟಕದ ಹಿನ್ನೆಲೆಯಲ್ಲಿ ಮೂಡಿಬಂದಿರುವ ಈ ಕೃತಿಯ ಆಶಯವನ್ನು 'ಜೂಜು' ಮತ್ತು 'ದಡ ಸೇರಿಸು ತಂದೆ' ಎಂಬ ಎರಡು ಪ್ರಾತಿನಿಧಿಕ ಕತೆಗಳ ಮೂಲಕ ಇಲ್ಲಿ ವಿಶ್ಲೇಷಿಸಲಾಗಿದೆ. 'ಜೂಜು' ಕತೆಯು ಮನುಷ್ಯ ಸಂಬಂಧಗಳು, ಧಾರ್ಮಿಕ ಬಿಕ್ಕಟ್ಟು ಹಾಗೂ ವ್ಯವಸ್ಥೆಯ ತಾರತಮ್ಯವನ್ನು ನೈಜವಾಗಿ ಚಿತ್ರಿಸಿದರೆ, 'ದಡ ಸೇರಿಸು ತಂದೆ' ಕತೆಯು ನಿಸರ್ಗ-ಮನುಷ್ಯನ ನಡುವಿನ ಸಂಘರ್ಷ ಹಾಗೂ ಬಂಡವಾಳಶಾಹಿಗಳ ಶೋಷಣೆಯನ್ನು ಅದ್ಭುತ ರೂಪಕಗಳ ಮೂಲಕ ತೆರೆದಿಡುತ್ತದೆ. ಕತೆಗಾರರ ವಿಶಿಷ್ಟ ಪ್ರಾದೇಶಿಕ ಭಾಷೆ, ದಟ್ಟ ವಿವರಗಳು ಮತ್ತು ಜೀವಪರ ಕಾಳಜಿಗಳು ಸಮಕಾಲೀನ ತಲ್ಲಣಗಳಿಗೆ ಹೇಗೆ ಕನ್ನಡಿ ಹಿಡಿಯುತ್ತವೆ ಎಂಬುದನ್ನು ಇಲ್ಲಿ ಸಮರ್ಥವಾಗಿ ಮಂಡಿಸಲಾಗಿದೆ.



**KEYWORDS**: ಅಮರೇಶ ನುಗಡೋಣಿ, ದಡ ಸೇರಿಸು ತಂದೆ, ಕನ್ನಡ ಸಣ್ಣಕತೆ, ಸಾಮಾಜಿಕ ಸಂಕೀರ್ಣತೆ, ಜೀವಪರ ಕಾಳಜಿ.



* **ಡಾ. ಅಮರೇಂದ್ರ ಶೆಟ್ಟಿ ಆರ್.**, ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಕನ್ನಡ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಂಗಳೂರು.

ಎಂಭತ್ತರ ದಶಕದ ಆಸುಪಾಸಿನ ವಿದ್ಯಮಾನಗಳು ಮತ್ತು ಹಠಾತ್ತನೆ ಮಗ್ಗುಲು ತಿರುಗಿದ ತೊಂಬತ್ತರ ದಶಕದ ಬದುಕಿನ ಬಗ್ಗೆ ತೀವ್ರವಾಗಿ ಧ್ಯಾನಿಸಿ ಬರೆದವರು ಅಮರೇಶ ನುಗಡೋಣಿ. ಕಲ್ಯಾಣ ಕರ್ನಾಟಕದ ಸುಡು ಸಂಕಟದ ಸೀಮೆಯಿಂದ ಬಂದ ನುಗಡೋಣಿಯವರ ಕಥನ ಪ್ರತಿಭೆ ತಮ್ಮ ಸಮಕಾಲೀನರಿಗಿಂತ ಬಹು ವಿಶಿಷ್ಟ.

ನುಗಡೋಣಿಯವರ ಕತೆಗಳು ಕಾದಂಬರಿಯ ವಸ್ತು ವಿಸ್ತಾರ ಹೊಂದಿರುವ ರಚನೆಗಳು. ಕತೆಗಳನ್ನು ತುಂಬ ಸಣ್ಣ ಚೌಕಟ್ಟಿನಲ್ಲಿ ಹಿಡಿದಿಡುವ ವಿಚಾರದಲ್ಲಿ ಅವರಿಗೆ ತೀವ್ರ ತಕರಾರಿದೆ. ಬಹುಶಃ ಕತೆಗೆ ವಿಸ್ತಾರ ಆವರಣ ಸೃಷ್ಟಿಸುವ ಹಾಗೂ ಬದುಕಿನ ಸೂಕ್ಷ್ಮಗಳನ್ನು ಸಾವಧಾನದಿಂದ ದಿಟ್ಟಿಸುವ ಅವರ ಗುಣವೇ ಇಂತಹ ನಿಲುವಿಗೆ ಕಾರಣವಿರಬಹುದು. ಕೇಂದ್ರ ಸಾಹಿತ್ಯ ಅಕಾಡೆಮಿ ಪಡೆದ ‘ದಡ ಸೇರಿಸು ತಂದೆ’ ಸಂಕಲನದ ಕತೆಗಳು ಕೂಡ ಅವರ ಇತರರೆಲ್ಲ ಕೃತಿಗಳಂತೆ ಬದುಕನ್ನು ಅದರೆಲ್ಲ ವೈವಿಧ್ಯಗಳು ಹಾಗೂ ಸಂಕೀರ್ಣತೆಗಳ ಜೊತೆಗೆ ನೋಡಲೆತ್ನಿಸುವ ರಚನೆಗಳು.

ಈ ಸಂಕಲನದ ‘ಜೂಜು’ ಮತ್ತು ‘ದಡ ಸೇರಿಸು ತಂದೆ’ ಎಂಬ ಎರಡು ಕತೆಗಳನ್ನು ಪ್ರಾತಿನಿಧಿಕವಾಗಿ ಚರ್ಚಿಸುವ ಮೂಲಕ ಸಂಕಲನದ ಎಲ್ಲ ಕತೆಗಳ ಧ್ವನಿಯನ್ನು ಅರ್ಥ ಮಾಡಿಕೊಳ್ಳಲು ಯತ್ನಿಸಬಹುದು ಎಂದು ಭಾವಿಸಿದ್ದೇನೆ.

‘ಜೂಜು’ ಕತೆಯಲ್ಲಿ ನಿಜಾಮಸಾಬನಿಗೆ ಇಬ್ಬರು ಹೆಣ್ಣುಗಳು. ಇಬ್ಬರೂ ಬೇರೆ ಬೇರೆ ಧರ್ಮದವರು. ಒಬ್ಬಳು ಮದುವೆಯಾದ ರಜಿಯಾ, ಮತ್ತೊಬ್ಬಳು ಪ್ರೇಯಸಿ ಹುಲುಗಮ್ಮ. ಇಬ್ಬರು ಹೆಣ್ಣುಮಕ್ಕಳು. ರಜಿಯಾಳಿಂದ ಸ್ವಂತ ಮಗಳು ಸನಾ. ಹುಲುಗಮ್ಮನಿಗೆ ಅವಳ ಗಂಡನಿಂದಾದ ಮಗಳು ಭವಾನಿ. ಭವಾನಿ ಎಳೆಯ ಕೂಸಾಗಿದ್ದಾಗಲೇ ಅಪ್ಪನನ್ನು ಕಳೆದುಕೊಂಡವಳಾದ್ದರಿಂದ ನಿಜಾಮಸಾಬನನ್ನೇ ಅಪ್ಪನೆಂದು ಮನಸಾರೆ ಒಪ್ಪಿದ್ದಾಳೆ. ಇಬ್ಬರು ಹೆಣ್ಣುಮಕ್ಕಳೂ ಮೂವತ್ತರ ವಯಸ್ಸಿಗೆ ತಲುಪಿದ್ದರೂ ಇನ್ನೂ ಮದುವೆ ಆಗಿಲ್ಲ. ನಿಜಾಮಸಾಬನಿಗೆ ಇಟ್ಟಂಗಿ ಮಾಡುವ ಒಂದು ಕಸುಬು, ಗುಂಡು ಎಸೆವ ಜೂಜಿನಂತಹ ಆಟದ ಒಂದು ಮೋಜು. ಮಂಜಪ್ಪ ಮತ್ತು ಜಂಬೂನಾಥ ಎಂಬಿಬ್ಬರು ಸಾಲ ಕೊಟ್ಟವರು. ಪ್ರಸ್ತುತ ಇಬ್ಬರು ಸಾಲಗಾರರೂ ಅವನ ಬೆನ್ನತ್ತಿದ್ದಾರೆ, ತಮ್ಮ ಹೆಣ್ಣುಮಕ್ಕಳ ಮದುವೆ ಮಾಡೆಂದು ಇಬ್ಬರು ಹೆಂಡಿರೂ ಜಗಳಕ್ಕೆ ಬಿದ್ದಿದ್ದಾರೆ.

ಊರಿನಲ್ಲಿ ಶ್ರಾವಣ ಮಾಸದಲ್ಲಿ ನಡೆಯುವ ಗುಂಡೆಸೆಯುವ ಜೂಜು, ದೀಪಾವಳಿಯ ಬೇಟೆ, ಯುಗಾದಿಯ ಇಸ್ಪೀಟ್ ಆಟಕ್ಕೆ ಮೊದಲಿನ ಸಂಭ್ರಮ, ಸೌಹಾರ್ದ ಎರಡೂ ಉಳಿದಿಲ್ಲ. ಕೆಲವು ವರ್ಷಗಳಿಂದಲೇ ಹದ ತಪ್ಪಿತ್ತು. ಮೋಸ, ವಂಚನೆ, ಜಿದ್ದುಗಳು ಎಲ್ಲರಲ್ಲೂ ತುಂಬಿದ್ದವು. ಗುಂಡೆಸೆವ ಆಟದಲ್ಲಿ ಸ್ವತಃ ನಿಜಾಮಸಾಬನಿಗೇ ಮೋಸವಾಗಿತ್ತು. ಮತ್ತೆಂದು ಈ ಆಟಕ್ಕೆ ಬರಲಾರೆ ಎಂದು ದೂರ ಉಳಿದಿದ್ದ.

ಅಂತಹ ದಿನಗಳಲ್ಲಿ ಸಾಲ ಮತ್ತು ಮಕ್ಕಳ ಮದುವೆಯ ಖರ್ಚಿಗೆ ಹಣ ಹೊಂದಿಸುವ ಒತ್ತಡದಲ್ಲಿದ್ದ ನಿಜಾಮಸಾಬ ಒಂಬತ್ತು ವರ್ಷಗಳ ವಿರಾಮದ ನಂತರ ಯಾರದ್ದೋ ಒತ್ತಡಕ್ಕೆ ಮಣಿದು, ಖುಷಿಯ ಹಣಕ್ಕೆ( ಪಣ ಕಟ್ಟಿದವನು ಅವನ ಪರವಾಗಿ ಇವನು ಗೆದ್ದ ನಂತರ ಕೊಡುವ ಬಹುಮಾನ) ಆಸೆಪಟ್ಟು ಗುಂಡೆಸೆವ ಆಟದ ಹುರಿಯಾಳಾಗುತ್ತಾನೆ. ಗೆದ್ದು ಐದು ಸಾವಿರ ಕಡಿಮೆ ಒಂದು ಲಕ್ಷ ರೂಪಾಯಿಯನ್ನು ಖುಷಿಯ ರೂಪದಲ್ಲಿ ಪಡೆಯುತ್ತಾನೆ. ಇನ್ನೊಂದೆಡೆ, ನಿಜಾಮಸಾಬನಿಗೆ ಹುಲುಗಮ್ಮನೊಂದಿಗೆ ಇರುವ ಸಂಬಂಧವೇ ತನ್ನ ಮಗಳು ಸನಾಳ ಮದುವೆಗೆ ಅಡ್ಡಿಯಾಗುತ್ತಿರುವುದರಿಂದ ರಜಿಯಾ ಕಂಗಾಲಾಗಿದ್ದಾಳೆ. ಮುಖ್ಯವಾಗಿ ಸನಾಳಿಗೆ ಎಂದು ರಜಿಯಾ ಹೊಂಚಿರುವ ಅಬ್ಬಾಸ್ ಹುಲುಗಮ್ಮನ ಮಗಳು ಭವಾನಿಯ ಹಿಂದೆ ಸುಳಿಯುತ್ತಿರುವುದು ಅವಳ ತಲೆ ಕೆಡಿಸಿದೆ. ಮತ್ತೊಂದೆಡೆ ಹುಲುಗಮ್ಮನಿಗೆ ಸಾಬಿ ನಿಜಾಮಸಾಬನ ಸಂಬಂಧಕ್ಕೆ ಸಮಸ್ಯೆ ಇಲ್ಲ. ಆದರೆ ಮಗಳನ್ನು ಮಾತ್ರ ಸಾಬಿ ಅಬ್ಬಾಸನಿಗೆ ಕೊಡಲು ಇಷ್ಟವಿಲ್ಲ.

ತನ್ನ ಗಂಡನನ್ನು ನಂಬಿಕೊಂಡರೆ ಮಗಳ ಮದುವೆ ಕಷ್ಟ ಎಂದು ಭಾವಿಸಿದ ರಜಿಯಾ ಎಂದೂ ಹುಲುಗಮ್ಮನ ವಿಚಾರಕ್ಕೇ ಹೋಗದವಳು ಈಗ ಮಗಳು ಸನಾಳನ್ನು ಜೊತೆಗಿರಿಸಿಕೊಂಡೇ ಹುಲುಗಮ್ಮನ ಮನೆಗೆ ಬಂದು ಅಬ್ಬಾಸನೊಂದಿಗೆ ಸನಾಳ ಮದುವೆ ಮಾಡಲು ಅವಳ ಸಹಾಯ ಕೇಳುತ್ತಾಳೆ. ಹುಲುಗಮ್ಮನೂ ಉದಾರ ಮನಸ್ಸಿನಿಂದ ಒಪ್ಪುತ್ತಾಳೆ. ಅದೇ ಸಮಯಕ್ಕೆ ಗುಂಡೆಸೆವ ಆಟದ ಬಾಜೀಗಾರರು ಖುಷಿ ಎಂದು ಕೊಟ್ಟ ಹಣದೊಂದಿಗೆ ನಿಜಾಮಸಾಬನೂ ಅಲ್ಲಿಗೆ ಬಂದು ಇಬ್ಬರು ಹೆಂಡಿರ ಮಕ್ಕಳ ಮದುವೆಗೆ ಹಣ ನೀಡುತ್ತಾನೆ. ಅದಾದ ಕೊಂಚ ಹೊತ್ತಿಗೇ ಪೊಲೀಸರು ದಾಳಿ ಮಾಡಿ ಜೂಜಾಟವಾಡಿದನೆಂದು ಆರೋಪಿಸಿ ನಿಜಾಮಸಾಬನನ್ನೂ, ಹಣವನ್ನೂ ವಶಕ್ಕೆ ತೆಗೆದುಕೊಳ್ಳುತ್ತಾರೆ. ಅವನನ್ನು ಬಿಡಿಸಿ ತರಲು ಹುಲುಗಮ್ಮ, ರಜಿಯಾ ಏನೇನೋ ಪಾಡು ಪಡುತ್ತಾರೆ. ಮಠದ ಸ್ವಾಮಿಯ ನೆರವನ್ನೂ ಯಾಚಿಸುತ್ತಾರೆ. ಆದರೆ ಅಲ್ಲಿಂದಲೂ ಹಣದ ಬೇಡಿಕೆ ಬರುತ್ತದೆ. ಅಂತೂ ಪೊಲೀಸರೇ ದಯೆ ತೋರುವ ನಾಟಕವಾಡಿ ಹಣವನ್ನು ತಾವು ಕಸಿದುಕೊಂಡು, ನಿಜಾಮಸಾಬನನ್ನು ಬಿಡುತ್ತಾರೆ. ಜೂಜಿನಾಟ ಎಂದು ತನ್ನನ್ನು ಮಾತ್ರ ಹಿಡಿದು, ದಂಡಿಸಿ, ಹಣ ದೋಚಿದ ಪೊಲೀಸರ ತಾರತಮ್ಯದ ವಿರುದ್ಧ ನಿಜಾಮಸಾಬ ಸಿಡಿದೆಳುತ್ತಾನೆ. ನ್ಯಾಯಕ್ಕಾಗಿ ಆಗ್ರಹಿಸುತ್ತಾನೆ. ಇದು ಕತೆಯ ಸಾರ.

ಇಷ್ಟು ವಿವರಗಳನ್ನು ಹೇಳಲು ಕಾರಣವೆಂದರೆ, ನುಗಡೋಣಿಯ ಕತೆಗಳಲ್ಲಿ ಘಟನೆಗಳು ಮತ್ತು ಅದಕ್ಕಾಗಿ ಸೃಷ್ಟಿಸುವ ಪರಿಸರ ಹಾಗೂ ವಿವರಗಳ ಜಗತ್ತು ತುಂಬಾ ದಟ್ಟವಾದುದು. ಕತೆಯಲ್ಲಿ ಯಾವ ಸಣ್ಣ ಸಂಗತಿಯನ್ನು ಮರೆತರೂ ಇಡೀ ಕತೆಯನ್ನು ಅರಿವ ದಾರಿ ದಿಕ್ಕು ತಪ್ಪುತ್ತದೆ. ಜೂಜು ಕತೆಯೂ ಹಾಗೆಯೇ. ಇದೊಂದು ದಟ್ಟ ವಿವರಗಳ ಸಂಕೀರ್ಣ ಹೆಣಿಗೆ. ಹಾಗೆಂದು ಕತೆಯ ಆಸ್ವಾದನೆ ಜಟಿಲವಲ್ಲ.

ಅತ್ಯುತ್ತಮ ಕತೆಯಲ್ಲಿ ಪರಸ್ಪರ ಜೊತೆಗೂಡುವ ಸತ್ವಯುತ ಕಥಾವಸ್ತು,

ಅತ್ಯಂತ ಪರಿಣಾಮಕಾರಿಯಾಗಿ ಬಳಕೆಯಾಗಿರುವ ಪ್ರಥಮ ಪುರುಷ (ಅವರು, ಇವರು, ಅದು, ಇದು) ನಿರೂಪಣೆ, ಪ್ರತಿಯೊಂದು ಘಟನೆಯೂ ಇನ್ನೊಂದು ಘಟನೆಗೆ ಕೀಲೆಣ್ಣೆಯಂತೆ ಶಕ್ತಿ ತುಂಬುವಂತಿರುವ ಕಥನ ತಂತ್ರ ಮತ್ತು ವಿಶಿಷ್ಟ ನಿರೂಪಣಾ ಶೈಲಿ, ಪ್ರತಿಯೊಂದು ಪಾತ್ರಕ್ಕೂ ಇರುವ ಸಾಂದ್ರ ಗುಣ, ಕತೆಯ ಮೊದಲ ವಾಕ್ಯದಿಂದ ಕೊನೆಯ ವಾಕ್ಯದವರೆಗೂ ಕಿಂಚಿತ್ತೂ ಸಡಿಲಾಗದ ಕತೆಯ ಶಿಲ್ಪ ಮತ್ತು ಬಂಧ. ಬಹುಮುಖ್ಯವಾಗಿ ಮೊದಲ ವಾಕ್ಯದಿಂದಲೇ ಗಮ್ಯದ ಕಡೆಗೆ, ಪರಿಣಾಮದ ಕಡೆಗೆ ಏಕಾಗ್ರವಾಗಿ ಸಾಗುವ ಕತೆಯ ಆಶಯ, ಕತೆ ನಡೆಯುವ ಪರಿಸರದ ಜೀವಂತ ಭಾಷೆ, ನುಡಿಗಟ್ಟಿನ ಬಳಕೆ (ಕತೆಯೊಳಗಿನ ಸಂಭಾಷಣೆಗೆ ಆಡು ಮಾತು, ವಿವರಗಳಿಗೆ ಪ್ರಮಾಣಿತ ಭಾಷೆ ಎನ್ನುವುದು ಸಾಮಾನ್ಯವಾಗಿ ಕಥನದಲ್ಲಿ ಇರುವ ಅನುಕೂಲಕರ ನಿಯಮ. ಆದರೆ ನುಗಡೋಣಿಯವರ ಮೊದಲ ಕತೆಗಳಲ್ಲಿ ಈ ನಿಯಮ ಇದ್ದರೂ, ಪ್ರತಿಯೊಂದು ಕತೆಯಲ್ಲೂ ಅದನ್ನು ಮೀರುವ ತಹತಹ ಕಾಣುತ್ತಿತ್ತು. ದಡ ಸೇರಿಸು ತಂದೆ ಸಂಕಲನದಲ್ಲಿ ಆಡುನುಡಿಯನ್ನೇ ವಿವರಗಳ ವಾಹಕವಾಗಿ ಯಶಸ್ವಿಯಾಗಿ ಬಳಸಲಾಗಿದೆ. ಬಹುಶಃ ಪ್ರಥಮ ಪುರುಷ ನಿರೂಪಣೆಯ ಸರ್ವಸಾಕ್ಷಿತ್ವ ದೃಷ್ಟಿಕೋನದ ಕಥಾ ನಿರೂಪಣೆಗಳು ಇಂತಹ ಭಾಷಿಕ ಪ್ರಯೋಗಕ್ಕೆ ಹೆಚ್ಚು ಅನುಕೂಲಕರವಾಗಿರುತ್ತವೆ ಅಂದುಕೊಂಡಿದ್ದೇನೆ) ಇವೆಲ್ಲವೂ ಸೇರಿ ಕತೆಯನ್ನು ಒಂದು ಕಲಾಕೃತಿಯಂತೆ ಮಾಡಿರುವುದನ್ನು ಗಮನಿಸಬಹುದು.

ಈ ಕತೆಯಲ್ಲಿ ವಿಶೇಷವೊಂದಿದೆ. ಅದೇನೆಂದರೆ, ನಿಜಾಮಸಾಬನಿಗೆ ಹುಲುಗಮ್ಮನ ನಂಟಿದೆ. ತನ್ನ ಬಳಗದವರು ಹೇಳಿದರೂ ಅವನು ಅವಳನ್ನು ಬಿಡಲೊಲ್ಲ. ಅವಳೂ ಅಷ್ಟೇ. ಊರಿನಲ್ಲಿ 'ಅವರು ಅಥವಾ ಅನ್ಯ (ಮುಸ್ಲಿಂ), 'ನಾವು ಅಥವಾ ಹಿಂದೂ ' ಎನ್ನುವ ಬೈನರಿ ಗಡಿ ಗೆರೆಗಳು ಇವೆ. ಅದು ಭಾರತೀಯ ಬದುಕಿನಲ್ಲಿ ಶತಮಾನಗಳಿಂದ ಸೇರಿಕೊಂಡಿರುವ ಒಳ ವ್ಯಾಧಿ. ಅದು ಈಗ ಕೆಲವೆಡೆ ರಾಕ್ಷಸಾಕಾರಕ್ಕೆ ಬೆಳೆದಿದೆ. ಕೆಲವೆಡೆ ಇನ್ನೂ ಆಕಾರ ಪಡೆಯುತ್ತಿದೆ. ಹಾಗೆ ಇನ್ನೂ ಆಕಾರ ಪಡೆಯುತ್ತಿರುವ ಸಾಮಾಜಿಕ ಪರಿಸರದಲ್ಲಿ ನಿಜಾಮಸಾಬ ಇದ್ದಾನೆ. ಹಾಗಾಗಿ, ತಕ್ಕಮಟ್ಟಿಗೆ ಸುರಕ್ಷಿತವಾಗಿಯೇ ಇದ್ದಾನೆ. ಆದರೆ ಅದು ಒಳಗೊಳಗೇ ಸಜ್ಜುಗೊಳ್ಳುತ್ತಿರುವ ಸಾಮಾಜಿಕ ಕುದಿ. ಯಾವಾಗ ಸ್ಫೋಟಿಸುತ್ತದೆಯೋ ತಿಳಿಯದು. ಆದರೆ, ಕತೆಯಲ್ಲಿ ಇದೊಂದು ಆತಂಕಕಾರಿ ಸಾಮಾಜಿಕ ವ್ಯವಸ್ಥೆಯನ್ನು ನುಗಡೋಣಿ ಕಾಣಿಸುವ ಬಗೆಯೇ ಅದ್ಭುತ. ಅದೆಲ್ಲಿಯೂ ವಾಚ್ಯವಾಗಿ ಪ್ರಕಟವಾಗುವುದಿಲ್ಲ. ಕೇವಲ ಒಂದೇ ಒಂದು ಸಲ ಹುಲುಗಮ್ಮನ ಮೂಲಕ ಮಾತ್ರ ಅದು ಸ್ಪಷ್ಟವಾಗಿ ಪ್ರಕಟವಾಗುತ್ತದೆ. ಅದೂ ಕೂಡ ಧರ್ಮದ ಕಟ್ಟಳೆ ಮೀರಿ ಅವನೊಂದಿಗೆ ಸಂಬಂಧ ಬೆಳೆಸಿಕೊಂಡಿರುವ ಹುಲುಗಮ್ಮನಿಂದ. ನಿಜಾಮಸಾಬನೂ ಸಿಡಿಯುತ್ತಾನೆ. ಆದರೆ ತನ್ನೊಳಗೇ ಮಾತ್ರ. ಹೀಗೆ ಒಂದು ಸಾಮಾಜಿಕ ವ್ಯವಸ್ಥೆಯ ಸಂಕೀರ್ಣ ಹೆಣಿಗೆಯನ್ನು ವಿಷಾದದಿಂದ ಚಿತ್ರಿಸುವ ಕತೆ ಇದು. ಎಲ್ಲಿಯೂ ಯಾವುದೋ ಒಂದೆಡೆಗೆ ವಾಲದೆ ಇಡೀ ಜೀವ ಜಗತ್ತನ್ನು ಪ್ರೀತಿ, ಅನುಕಂಪದಿಂದ ನೋಡುವ ದೃಷ್ಟಿಕೋನ ನುಗಡೋಣಿಯವರದು. ಅದು ಜೂಜು ಕತೆಯಲ್ಲಿ ಢಾಳಾಗಿ ಕಾಣುತ್ತದೆ.

ನುಗಡೋಣಿ ಭೂತಕಾಲದ ಬುತ್ತಿಯನ್ನು ಹೆಚ್ಚು ನೆಚ್ಚಿಕೊಳ್ಳುವ ಕತೆಗಾರರು ಎನ್ನುವ ಮಾತಿದೆ. ಸಂವೇದನಾಶೀಲ ಕತೆಗಾರನಲ್ಲಿ ಭೂತ–ವರ್ತಮಾನ–ಭವಿಷ್ಯಗಳು ಒಂದರೊಳಗೊಂದು ಹೆಣೆದುಕೊಂಡಿರುತ್ತವೆ, ಒಂದು ಇನ್ನೊಂದನ್ನು ನಿರ್ದೇಶಿಸುತ್ತಿರುತ್ತವೆ. ನುಗಡೋಣಿಯವರ ಕತೆಗಳಲ್ಲಿ ಆಗುವುದೂ ಅದೇ. ಸಮಕಾಲೀನ ಸಂಕಟಗಳಿಗೆ ತೀವ್ರವಾಗಿ ಮಿಡಿಯುವ ನುಗಡೋಣಿಯವರ ಮನೋಧರ್ಮಕ್ಕೆ ನಿದರ್ಶನವೆಂಬಂತೆ ಅವರ 'ದಡ ಸೇರಿಸು ತಂದೆ' ಕತೆಯನ್ನು ನೋಡಬಹುದು.

ಸಕಲ ನಾಗರಿಕ ಸೌಲಭ್ಯಗಳಿಂದ ವಂಚಿತರಾಗಿದ್ದರೂ, ಮಳೆಗಾಲದಲ್ಲಿ ಹೊರ ಜಗತ್ತಿನ ಸಂಪರ್ಕವೇ ಇರದಿದ್ದರೂ ಮಲೆದುರ್ಗದ ನಡುಗಡ್ಡೆಗಳಲ್ಲಿ ವಾಸವಾಗಿರುವ ಜನ. ಅವರ ಹಕ್ಕು–ಸವಲತ್ತುಗಳಿಗಾಗಿ ಪ್ರಾಣದ ಹಂಗು ತೊರೆದು ಹೋರಾಡುವ ಸಂಗಮ. ಅವನಿಗೆ ಒಲಿದು ಬಂದಿರುವ ಮೌನೇಶ್ವರಿ ಅರ್ಥಾತ್ ಮೌನಕ್ಕ. ಅವಳ ಹೆಸರಿಗೆ ಅನ್ವರ್ಥವೋ ಎಂಬಂತೆ ಅವಳೊಂದಿಗೆ ಮೌನವಾಗಿಯೇ ಸಂವಾದಿಸುವ ಸುತ್ತಲ ಹಳ್ಳಕೊಳ್ಳ, ಕಾಡು, ಬೆಟ್ಟ, ನೀರು, ಹಕ್ಕಿ, ಮಿಗ. ನಡುಗಡ್ಡೆಗಳನ್ನು ರೆಸಾರ್ಟ್ ಮಾಡಲು ಹವಣಿಸುತ್ತಿರುವ ಮತ್ತು ನಿವಾಸಿಗಳನ್ನು ಒಕ್ಕಲೆಬ್ಬಿಸಲೆತ್ನಿಸುತ್ತಿರುವ ಪ್ರವಾಸೋದ್ಯಮಿಗಳು. ಅವರಿಗೆ ಪ್ರತ್ಯಕ್ಷ, ಪರೋಕ್ಷವಾಗಿ ಬೆಂಬಲಿಸುತ್ತಿರುವ ಆಡಳಿತ ಯಂತ್ರ. ಅಚ್ಚರಿಯೆಂಬಂತೆ ತುಸುವಾದರೂ ಸಾಮಾಜಿಕ ಜವಾಬ್ದಾರಿಯಿಂದ ವರ್ತಿಸುವ ಮಾಧ್ಯಮಗಳು, ಸರ್ಕಾರಿ ನೌಕರರು. ರೆಸಾರ್ಟ್‌ಗಾಗಿ ನಡುಗಡ್ಡೆಗಳಲ್ಲಿ ವಾಸವಿರುವ ಸಂಗಮನ ಬಂಧುಗಳನ್ನು ಬಗೆಬಗೆಯಾಗಿ ಬೆನ್ನತ್ತಿರುವ ರೆಸಾರ್ಟ್ ರೂವಾರಿ ರಂಗನಾಥ ದೊರೆಯ ಮಂದಿ. ಜೀವ ಭಯ ಮತ್ತು ಸೌಲಭ್ಯಗಳ ಆಕರ್ಷಣೆಗೆ ಸೋತು ನಿಧಾನವಾಗಿ ಹಣ–ಆಮಿಷಗಳ ಕಡೆಗೆ ವಾಲುತ್ತಿರುವ ನಡುಗಡ್ಡೆಗಳ ಜನ. ಆರು ತಿಂಗಳಿಂದ ಕಾಣೆಯಾಗಿರುವ ಸಂಗಮ. ಅವನಿಗಾಗಿ ಚಾತಕ ಪಕ್ಷಿಯಂತೆ ಕಾಯುತ್ತಿರುವ ಒಂಬತ್ತು ತಿಂಗಳ ತುಂಬು ಗರ್ಭಿಣಿ ಮೌನೇಶ್ವರಿ ಅಥವಾ ಮೌನಕ್ಕ. ಅವಳ ಹೊಟ್ಟೆಯಲ್ಲಿ ಹೊರಳುವ ಜೀವ. ಮೌನಕ್ಕನಿಗಾಗಿ ಕಣ್ಣು ತೇವ ಮಾಡಿಕೊಳ್ಳುವ ಊರ ಜೀವಗಳು. ಮೌನಕ್ಕನನ್ನೇ ತಮ್ಮ ಗರ್ಭದಲ್ಲಿಟ್ಟುಕೊಂಡಂತೆ ಸುಖದುಸಿರು ಬಿಡುವ ಸುತ್ತಲ ನಿಸರ್ಗ. ದನ ಕಾಯುವ ಹುಡುಗನ ಭಗ್ನಗೊಂಡ ಪಿಳ್ಳಂಗೋವಿ ಇವೆಲ್ಲ ನುಗಡೋಣಿ ಕಟ್ಟಿಕೊಡುವ ಅದ್ಭುತ ಶಬ್ದ ಚಿತ್ರಗಳು. ಓದುತ್ತ ಓದುತ್ತ ಇಡೀ ಕತೆಯೇ ಭೂತಾಯಿಯ ವಿಷಾದ ಸ್ವಗತದಂತೆ ಭಾಸವಾಗುತ್ತದೆ.

ಈ ಕತೆ ತೆರೆದುಕೊಳ್ಳುವುದೇ ಮೂರ್ನಾಲ್ಕು ಪುಟಗಳ ನಂತರ. ಕತೆಯ ಭೂಮಿಕೆಯನ್ನು ಅಷ್ಟು ಎಚ್ಚರದಿಂದ ನುಗಡೋಣಿ ನಿರ್ವಹಿಸುತ್ತಾರೆ. ಇಡೀ ಕತೆಯೇ ಒಂದು ರೂಪಕದಂತೆ ಭಾಸವಾಗುತ್ತದೆ. ವರ್ತಮಾನದ ಸಂಕಟಗಳನ್ನು ಇಷ್ಟು ತೀವ್ರವಾಗಿ ದಾಖಲಿಸುವ ಕನ್ನಡದ ಕೆಲವೇ ಕತೆಗಳಲ್ಲಿ ನುಗಡೋಣಿಯವರ ಈ ಕತೆಯೂ ಒಂದು.

ಹಾಗೆ ನೋಡಿದರೆ 'ದಡ ಸೇರಿಸು ತಂದೆ' ಸಂಕಲನವೇ ಒಂದು ರೂಪಕಗಳ

ಗುಚ್ಛದಂತೆ ಭಾಸವಾಗುತ್ತದೆ. ಇಲ್ಲಿನ ಭಾಷೆಯಂತೂ ಮಾಂತ್ರಿಕ ಗುಣದಿಂದ ಫಳಫಳಿಸುತ್ತದೆ. ವರ್ತಮಾನದ ಸುಡು ವಾಸ್ತವವನ್ನು ಬಿಚ್ಚಿ ಹರವುವ ಇಲ್ಲಿನ ಕತೆಗಳು ದೀರ್ಘಕಾಲ ನಮ್ಮನ್ನು ಬೆಂಬತ್ತಿ ಕಾಡುತ್ತವೆ. ಯಾವುದೇ ಸಾಹಿತ್ಯ ಕೃತಿಯ ಸಾರ್ಥಕತೆ ಇರುವುದೇ ಹೀಗೆ ಕಾಡುವುದರಲ್ಲಿ. ಹಾಗಾಗಿ, ನುಗಡೋಣಿಯವರ 'ದಡ ಸೇರಿಸು ತಂದೆ' ಕಥಾ ಸಂಕಲನ ತನ್ನ ವಿಶಿಷ್ಟ ವಸ್ತು, ಭಾಷೆ, ಕಥನ ಶೈಲಿ ಹಾಗೂ ಜೀವಪರ ಗುಣಗಳ ಕಾರಣಕ್ಕಾಗಿ ಕನ್ನಡ ಕಥಾ ಜಗತ್ತಿಗೆ ಸೇರ್ಪಡೆಯಾದ ಒಂದು ಶ್ರೇಷ್ಠ ಕೃತಿ.

**ಪರಾಮರ್ಶನ ಕೃತಿಗಳು:**


1. ಅಮರೇಶ ನುಗಡೋಣಿ, (2026), ದಡ ಸೇರಿಸು ತಂದೆ, ಚನ್ನಪಟ್ಟಣ: ಪಲ್ಲವ ಪ್ರಕಾಶನ.
2. ಅಮರೇಂದ್ರ ಹೊಲ್ಲಂಬಳ್ಳಿ, (2012), ಕನ್ನಡ ಸಣ್ಣ ಕತೆಗಳು ಮತ್ತು ಜಾಗತೀಕರಣ, ಬೆಂಗಳೂರು: ಐಸಿರಿ ಪ್ರಕಾಶನ.
3. ಅಶೋಕ ಟಿ.ಪಿ., (2013), ಕಥನ ಪ್ರೀತಿ, ಹೆಗ್ಗೋಡು: ಅಕ್ಷರ ಪ್ರಕಾಶನ.
4. ಆಮೂರ ಜಿ.ಎಸ್., (2004), ಸ್ವಾತಂತ್ರ್ಯೋತ್ತರ ಕನ್ನಡ ಕಥಾಲೋಕ, ಬೆಂಗಳೂರು: ಅಂಕಿತ ಪುಸ್ತಕ.
5. ಅಮರೇಂದ್ರ ಹೊಲ್ಲಂಬಳ್ಳಿ, (2025), ಕತೆಯ ಕೈ ಹಿಡಿದು, ಬೆಂಗಳೂರು: ರಾಸೀ ಪ್ರಕಾಶನ.
6. ಗಿರಡ್ಡಿ ಗೋವಿಂದರಾಜ, (2009), ಕಲ್ಪಿತ ವಾಸ್ತವ:ಸಣ್ಣ ಕತೆ, ಹುಬ್ಬಳ್ಳಿ: ಸಾಹಿತ್ಯ ಪ್ರಕಾಶನ.